# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಶಾಂತರಾಮ ಬುಡ್ನ ಸಿದ್ದಿ (ನಾಮನಿರ್ದೇಶಿತರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **305** |
| ಉತ್ತರಿಸಬೇಕಾದ ದಿನಾಂಕ | : | 15.12.2021 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಬುಡಕಟ್ಟು ಸಮುದಾಯದ ಅನೇಕ ಕುಟುಂಬಗಳಿಗೆ ಗ್ರಾಮ ಪಂಚಾಯ್ತಿಗಳಲ್ಲಿ ಮನೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; | ರಾಜ್ಯದಲ್ಲಿ ಬುಡಕಟ್ಟು ಸಮುದಾಯವನ್ನೂ ಒಳಗೊಂಡಂತೆ ಗ್ರಾಮೀಣ ಪ್ರದೇಶದ ಎಲ್ಲಾ ಸಮುದಾಯಗಳಲ್ಲಿನ ವಸತಿ ರಹಿತ/ನಿವೇಶನ ರಹಿತ ಕುಟುಂಬಗಳಿಗೆ ವಸತಿ ಸೌಲಭ್ಯವನ್ನು ಕಲ್ಪಿಸಿ ಕೊಡಲು ಸರ್ಕಾರವು ಕೆಳಕಂಡ ವಿವಿಧ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.<br>• ಡಾ॥ ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ<br>• ದೇವರಾಜು ಅರಸು ವಸತಿ ಯೋಜನೆ (ಅಂಗವಿಕಲರು, ವಿಧವೆಯರು, ನಿರ್ಗತಿಕರು, ಹಮಾಲರು, ಕುಶಲ ಕರ್ಮಿಗಳು ಮುಂತಾದ 14 ವಿಶೇಷ ವರ್ಗಗಳು)<br>• ಪ್ರಧಾನ ಮಂತ್ರಿ ಆವಾಸ್ ಯೋಜನೆ(ಗ್ರಾಮೀಣ)<br>• ಬಸವ ವಸತಿ ಯೋಜನೆ<br>ಸದರಿ ಯೋಜನೆಗಳಡಿ ಬುಡಕಟ್ಟು ಸಮುದಾಯಕ್ಕೆ ಸೇರಿದ ವಸತಿ ರಹಿತರನ್ನೂ ಒಳಗೊಂಡಂತೆ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ, ಅಲ್ಪಸಂಖ್ಯಾತ ಮತ್ತು ಸಾಮಾನ್ಯ ವರ್ಗಕ್ಕೆ ಸೇರಿದ ಅರ್ಹ ಫಲಾನುಭವಿಗಳನ್ನು ನಿಯಮಾನುಸಾರ ಆಯ್ಕೆಗೊಳಿಸಿ ವಸತಿ ಸೌಕರ್ಯ ಕಲ್ಪಿಸಿ ಕೊಡಲು ಅವಕಾಶ ಕಲ್ಪಿಸಿ ಕೊಡಲಾಗಿದ್ದು, ಈ ಸಮುದಾಯಕ್ಕೆ ಪ್ರತ್ಯೇಕವಾದ ವಸತಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವುದಿಲ್ಲ. |
| (ಆ) | ಹಾಗಿದ್ದಲ್ಲಿ, ಗ್ರಾಮ ಪಂಚಾಯಿತಿಗಳಿಗೆ ಮನೆ ಮಂಜೂರು ಮಾಡಿಕೊಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ? (ವಿವರ ನೀಡುವುದು) | ಪ್ರಸಕ್ತ ವರ್ಷ ಅಂದರೆ 2021-22 ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ ವಇ 44 ಹೆಚ್ಎಹೆಚ್ 2021(ಭಾಗ-1),ದಿನಾಂಕ:31.07.2021 ರಲ್ಲಿ ರಾಜ್ಯ ವಸತಿ ಯೋಜನೆಯಡಿ 1 ಲಕ್ಷ ಮನೆಗಳ ಗುರಿಯನ್ನು ಹಾಗೂ ಆದೇಶ ಸಂಖ್ಯೆ:ವಇ 44 ಹೆಚ್ ಎಹೆಚ್ 2021(ಭಾಗ-1), ದಿನಾಂಕ:09.09.2021 ರಲ್ಲಿ ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಗಳಡಿ 4 ಲಕ್ಷ ಹೊಸ ಮನೆಗಳ ಗುರಿ ಒಟ್ಟಾರೆಯಾಗಿ 5 ಲಕ್ಷ ಮನೆಗಳ ಗುರಿಗೆ ಎದುರಾಗಿ ಅರ್ಹ ಫಲಾನುಭವಿಗಳ ಆಯ್ಕೆಯನ್ನು ಪ್ರಾರಂಭಿಸುವಂತೆ ಸೂಚಿಸಿ, ಆದೇಶ ನೀಡಲಾಗಿದೆ. |

ಸಂಖ್ಯೆ :ವಇ 424 ಹೆಚ್ಎಎಂ 2021

(ವಿ. ಸೋಮಣ್ಣ)

ವಸತಿ ಮತ್ತು ಮೂಲಸೌಲಭ್ಯ

ಅಭಿವೃದ್ಧಿ ಸಚಿವರು